ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.287/2022

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸೋಮೇಗೌಡ ಹೆಚ್.ಪಿ. | ಸಿ.ಡಬ್ಲ್ಯೂಃ 13<br>ಪಿ.ಡಬ್ಲ್ಯೂಃ12 |
| ತಂದೆಯ ಹೆಸರು | ಃ ಹೆಚ್.ಎಸ್. ಪುಟ್ಟೇಗೌಡ | |
| ವಯಸ್ಸು | ಃ 58 ವರ್ಷ | |
| ಉದ್ಯೋಗ | ಃ ಹೆಚ್.ಸಿ.66, ಗೋಣಿಬೀಡು ಪೊಲೀಸ್ ಠಾಣೆ | |
| ವಾಸ ಸ್ಥಳ | ಃ ಗೋಣಿಬೀಡು | |

ದಿನಾಂಕಃ 20.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನಾನು ಆಗಸ್ಟ್ 2020 ರಿಂದ ಇಂದಿನವರೆಗೂ ನಾನು ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 15.01.2022 ರಂದು ನಾನು ಠಾಣಾ ಎಸ್.ಹೆಚ್.ಓ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಬೆಳಿಗ್ಗೆ 10.30 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 3/2022 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.28 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.28(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಸಿ.ಸಿ. ವಕೀಲರಿಂದ – **6** ಮತ್ತು **7** ನೇ ಆರೋಪಿತರ ಪರವಾಗಿಃ

3. ದಿಃ 15.01.2022 ರಂದು 9.00 ಗಂಟೆಗೆ ಠಾಣೆಗೆ ಹಾಜರಾಗಿರುತ್ತೇನೆ. ಚಾಸಾ.1 ರವರು ನೀಡಿದ ದೂರಿನ ಬಗ್ಗೆ ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ದೂರುದಾರರಿಗೆ ನೀಡಿದ ಬಗ್ಗೆ ದೂರುದಾರರ ಸಹಿಯನ್ನು ಪಡೆದುಕೊಂಡಿರುತ್ತೇನೆ. 10.45 ಗಂಟೆಗೆ ನಾನು ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ದೂರುದಾರರಿಗೆ ನೀಡಿರುತ್ತೇನೆ. ನನ್ನ ಮೇಲಾಧಿಕಾರಿಗಳಿಗೆ ದೂರುದಾರರು ದೂರನ್ನು ನೀಡಿದ ನಂತರ ಪ್ರಕರಣ ದಾಖಲು ಮಾಡುವ ಮೊದಲು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ನಿ.ಪಿ.1 ದಾಖಲಾತಿಯಲ್ಲಿ ಇರುವ ಬರವಣಿಗೆಯು ಮತ್ತು ಸದರಿ ದಾಖಲೆಯಲ್ಲಿ ಇರುವ ನನ್ನ ಬರವಣಿಗೆಯು ಒಂದೇ ಶಾಯಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಿಃ 15.02.2022 ರ ಪೂರ್ವದಲ್ಲಿ ಚಾಸಾ.1 ರವರು ನನಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಿ.ಪಿ.1 ದಾಖಲಾತಿಯನ್ನು ಒಂದೇ ಪೆನ್ನಿನಲ್ಲಿ ಬರೆದು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ದೂರನ್ನು ನಾನು ಸ್ವೀಕರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಸ್.ಡಿ., ಮತ್ತು ಪಿ.ಕೆ. ವಕೀಲರಿಂದ – **1** ರಿಂದ **4** ಮತ್ತು **5** ನೇ ಆರೋಪಿತರ ಪರವಾಗಿಃ

4. 6 ಮತ್ತು 7 ನೇ ಆರೋಪಿತರ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ**.,**
ಮೂಡಿಗೆರೆ**.**

ಸಾಕ್ಷಿಯ ಸಹಿ

ಮಾ